ಟೀವಿಯವ್ರಿಗೆ ಕೊಡ್ಬೇಡ. ಅದ್ರಿಂದ ಗ್ಯಾರಂಟಿ ತೊಂದ್ರೆ ಆಯ್ತದೆ... ಬೇಕಾದ್ರೆ ಬರೆದಿಟ್ಕೋ... ಆಮೇಲೆ ನನ್ನ ದೂರಂಗಿಲ್ಲ...' ಅಂತ ಹೆದರಿಸಿದೆ.

ಅಸ್ಗರನ ಕಣ್ಣುಗಳಲ್ಲಿ ಗಾಬರಿ ಕಾಣಿಸಿತು. ಈ ಬಾರಿ ಪ್ರಚಾರದ ಹುಚ್ಚಿಗೆ ಹೋಗಲಿಲ್ಲ. ಅದರಿಂದ ಯಾರ್ಯಾರಿಗೋ ಲಾಭವಾಗುತ್ತದೆಯೇ ಹೊರತು ತನಗೆ ಬರೋ ಭಾಗ್ಯವೇನಿಲ್ಲ ಎಂಬುದು ಅವನಿಗೇ ಗೊತ್ತಾಯಿತು. ಕೆಲವು ಹಳೆ ತಲೆಗಳು, ನಂಬಿಕಸ್ಥರು ಹಾಗೂ ಮಾಹಿತಿದಾರರನ್ನು ಹುಡುಕಿ ಫೋಟೊ ತೋರಿಸಿ ಕರಪತ್ರಗಳನ್ನು ಹಂಚಿದೆವು. ಬುರ್ಖಾ ಹಾಕಿದ್ದ ಮಹಿಳೆ ನೋಡಿ 'ಕೌನ್ ರೇ... ಇಸ್ಕಿ ಮಾ...' ಅನ್ನುತ್ತಾ ಅವರವರೇ ಮಾತಾಡಿಕೊಂಡರು.

'ಸಾ... ಮಗನ್ ಜೊತೆ ಬಂದು ಕಿಡ್ನಾಪು ಮಾಡ್ತೌಳೆ ಅಂದ್ರೆ... ಇಲ್ಲಿ ಯಾರಾದ್ರೂ ನೆಂಟ್ರು ಬಂಧೂ ಬಳ್ಗಾ ಇರ್ಲೇಬೇಕು ಸಾ...'

'ಇಲ್ಲೇ ಯಾರ ಮನೇಲೋ ಇದ್ಕಂಡು ಓಡಾಡಿ, ನೋಡ್ಕಂಡೇ ಮಾಡಿರಾದು ಸಾ ಇದೂ...'

'ಮಕ್ಕಳ್ನ ಹೊತ್ಕೊಂಡೋಗೋ ಗ್ಯಾಂಗು ಬಂದಿರ್ಬೇಕು ಸಾ...'

'ಮುಂದೆ ಇನ್ನಷ್ಟ್ ಮಕ್ಳು ಕಿಡ್ನಾಪು ಆದ್ರೂ ಆಗ್ಬೋದು... ಯಾವನಿಗ್ಗೊತ್ತು... ಅಲ್ವಾ ಸಾ...'

ಎದುರು ಸಿಕ್ಕ ಜನರೆಲ್ಲ ಹೀಗೆ ಕೇಳಿ ಕೇಳಿ ಉಳಿದಿದ್ದ ನೆಮ್ಮದಿಯನ್ನೂ ಕದಡಿಹಾಕಿದರು. 'ಏಯ್... ನಿಮ್ಮನೆ ಕಾಯ್ವಾಗಾ... ಸುಮ್ಸುಮ್ನೆ ಗಾಳಿಸುದ್ದಿ ಯಾಕ್ರಯ್ಯಾ ಹಬ್ಬಿಸ್ತೀರಾ... ಸ್ವಲ್ಪ ನಿಮ್ಮ ಬಾಯಿಗೆ ಬೀಗ ಹಾಕ್ಕಳ್ರೀ...' ಅಂತ ಗದರಿದೆ.

## ಪ್ರೊಬೇಷನರಿಯ ಎಂಟ್ರಿ

ಹೌದಲ್ಲ? ದೂರು ಬಂದಾಗಿನಿಂದ ನಮ್ಮ ಪ್ರೊಬೇಷನರಿಯನ್ನು ಮರೆತೇ ಬಿಟ್ಟಿದ್ದೆ. ರಘು... ಬ್ಯಾಚುಲರ್ ಆಫ್ ಎಂಜಿನಿಯರಿಂಗು... ತನ್ನನ್ನು ತಾನು ಬುದ್ಧಿವಂತನೆಂದು ನಂಬಿದ್ದವ... ಸಿವಿಲ್ ಸರ್ವೀಸು ಮಾಡುತ್ತೇನೆಂದು ಎಕ್ಸಾಮು ಕಟ್ಟಿ ಪದೇ ಪದೇ ರಜಾ ತೆಗೆದುಕೊಳ್ಳುತ್ತಿದ್ದವ... ಆಗಲೇ ಒಂದೆರೆಡು ಬಾರಿ ಯತ್ನಿಸಿ ಭ್ರಮನಿರಸನವಾದವ... ಅವನೂ ಜೊತೆಗಿದ್ದರೆ ವಾಸಿ ಅನ್ನಿಸಿತು. ಏನಾದರೂ ಸಲಹೆ ಕೊಡುತ್ತಿರುತ್ತಾನೆ. ಇಂತಹ ಪ್ರಕರಣಗಳಲ್ಲಿ ಒಬ್ಬರಿಗಿಂತ ಇಬ್ಬರು ಮೇಲು. ಒಬ್ಬರಿಗೆ ಹೊಳೆಯದ ಸಂಗತಿಗಳು ಇನ್ನೊಬ್ಬರ ತಲೆಯಲ್ಲಿ ಮೂಡುತ್ತಿರುತ್ತವೆ.

ಬಿಡಲಿಲ್ಲ. ಎಲ್ಲೋ ಅಡ್ಡಾಡಿಕೊಂಡಿದ್ದವನನ್ನು ಕರೆಸಿದೆ. ಬಂದವನೇ,

'ಒಂದ್ ವಿಷಯ ಹೇಳ್ಬೇಕಂತ ಇದ್ದೆ ಸಾರ್... ಸಿಸಿಟೀವೀಲಿ ಆ ಹುಡ್ಗ ಮಗೂನ ಎತ್ಕೊಂಡು ಹೋಗೋದು ನೋಡ್ದೆ. ಅದೇ ರೆಕಾರ್ಡಿಂಗ್‌ನ ಇನ್ನಾ ಮೊದ್ಲಿಂದ ನೋಡುದ್ರೆ ಈ ಐನಾತಿಗಳು ಏರಿಯಾಗೆ ಎಷ್ಟೊತ್ತಿಗೆ ಬಂದವ್ರೆ... ಯಾರ ಜೊತೆ ಬಂದವ್ರೆ?... ಅಲ್ಲಿಯವ್ರೇ ಯಾರಾದ್ರೂ ಕರ್ಕೊಂಡ್ ಬಂದವ್ರಾ?... ಇದೆಲ್ಲಾ ಗೊತ್ತಾಗ್ಬೋದು ಅಲ್ವಾ ಸಾರ್?' ಅಂತ ಕೇಳಿದ. ನಿನ್ನ ಕರೆಸಿದ್ದಕ್ಕೂ ಸಾರ್ಥಕವಾಯಿತು ಬಿಡು ಅಂದುಕೊಂಡೆ.

ಹಾಗೆಂದು ತಡ ಮಾಡಲಿಲ್ಲ, ಹರೀಶನ ಮುಖಾಂತರ ಆ ಸಿಸಿಟೀವಿಯ ಡಿವಿಆರ್ ಅನ್ನು ತರಿಸಿದೆ. ಹೇಳಿದ ಮಾತಿಗೆ ಕಟ್ಟುಬಿದ್ದ ರಘು ಮಾನಿಟರಿಗೆ ಕನೆಕ್ಟ್ ಮಾಡಿಕೊಂಡು ಕಿಡ್ನಾಪ್ ಆದ ದಿನ ಮತ್ತು ಅದರ ಹಿಂದುಮುಂದಿನ ದಿನಗಳ ವಿವರಗಳನ್ನೆಲ್ಲಾ ಜಾಲಾಡಿದ. ಅವನ ಪರಿಶೀಲನೆಯಿಂದ ಬಂದ ರಿಸಲ್ಟು ಆಸಕ್ತಿಕರವಾಗಿಯೇ ಇತ್ತು.

ಆ ದಿನ ಕಿಡ್ನಾಪ್ ಆಗುವುದಕ್ಕೂ ಒಂದೂವರೆ ಗಂಟೆ ಮೊದಲು ಆ ಮಹಿಳೆ ಮತ್ತು ಹುಡುಗ ಒಟ್ಟಿಗೇ ಏರಿಯಾದೊಳಗೆ ಕಾಲಿಟ್ಟಿದ್ದರು! ಇಬ್ಬರೂ ಮಾತನಾಡಿಕೊಂಡು ಜೊತೆಯಾಗಿ ನಡೆದು